# ವಚನ ಸಾಹಿತ್ಯದಲ್ಲಿ ಪರಂಪರೆ ಹಾಗೂ ಆಧುನಿಕ ಚಿಂತನೆಗಳು

ಶೋಭ ಎಸ್.

ಮೈಸೂರು

DOI: https://doi.org/10.5281/zenodo.15795831

## ABSTRACT:

ಕನ್ನಡ ಸಾಹಿತ್ಯದಲ್ಲಿ ಪ್ರಾಚೀನ ಕಾಲದಿಂದ ಇಂದಿನವರೆಗೆ ಚಳುವಳಿಗಳು ಎಂದು ನೋಡಿದಾಗ ಅದು ಪಂಪನಿಂದಲೇ ಆರಂಭವಾಗಿರುವುದನ್ನು ಕಾಣಬಹುದು. ಆತ ಬಂಡಾಯದ ದನಿ ಎತ್ತಿದ ಮೊದಲ ಕವಿಯಾಗಿದ್ದಾನೆ. ನಂತರದಲ್ಲಿ ವಚನ ಸಾಹಿತ್ಯದಲ್ಲಿ ಆದ ಚಳುವಳಿಯನ್ನು ನಿಜವಾದ ಸಾಮಾಜಿಕ ಚಳುವಳಿ ಎಂದೇ ಹೇಳಲಾಗಿದೆ. ಇದುವರೆಗೂ ಅರಮನೆಯಲ್ಲಿ ಪಂಡಿತಮಾನ್ಯರಿಗೆ ಮಾತ್ರ ಸೀಮಿತವಾಗಿದ್ದ ಸಾಹಿತ್ಯ, ಜನಸಾಮಾನ್ಯರ ಮನೆಯ ಅಂಗಳಕ್ಕೆ ಬಂದ ಸಾಹಿತ್ಯವೆಂದರೆ ಅದು ವಚನ ಸಾಹಿತ್ಯ. ಇಲ್ಲಿ ಎಲ್ಲಾ ಸ್ತರದ ಜನರು ಇದ್ದಾರೆ. ಇದು ಪ್ರಮುಖವಾಗಿ ಭಕ್ತಿ ಚಳುವಳಿ ಆದರೂ ಸಮಾಜದ ಓರೆ ಕೋರೆಗಳನ್ನು ತಿದ್ದುವ ಪ್ರಯತ್ನವನ್ನು ಮಾಡಿತು. ಜೇಡರ ದಾಸಿಮಯ್ಯ, ಅಲ್ಲಮ ಪ್ರಭು, ಬಸವಣ್ಣ, ಚೆನ್ನಬಸವಣ್ಣ, ಸಿದ್ದರಾಮ, ಅಕ್ಕಮಹಾದೇವಿ ಮುಂತಾದ ಪ್ರಮುಖ ವಚನಕಾರರನ್ನು ಕಾಣುತ್ತೇವೆ. ಇವರುಗಳು ಕಾಯಕವೇ ಕೈಲಾಸ ಎಂದು ನುಡಿದಂತೆ ನಡೆದು, ಅದನ್ನು ಸಮಾಜದ ಜನತೆಗೂ ಸಾರಿದರು. ಇವರ ಕಾಲದಲ್ಲಿ ಕೇಂದ್ರೀಕೃತ ರಾಜವ್ಯವಸ್ಥೆ ಇದ್ದರೂ ಅಂದಿನ ಸಮಾಜದಲ್ಲಿ ಜನರು ಎದುರಿಸುತ್ತಿದ್ದ ಸಮಸ್ಯೆಗಳು ಅಂದರೆ ವರ್ಗ ಸಂಘರ್ಷ, ಜಾತಿ ವ್ಯವಸ್ಥೆ, ಮೇಲು-ಕೀಳು, ಬಡವ-ಬಲ್ಲಿದ, ಲಿಂಗ ತಾರತಮ್ಯ, ಮೂಢನಂಬಿಕೆಗಳು ಮುಂತಾದವುಗಳ ವಿರುದ್ಧ ಹೋರಾಡಿ ಎಲ್ಲರೂ ಸಮಾನರು, ಸಾಮರಸ್ಯದಿಂದ ಬದುಕಬೇಕು, ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಹಾಗೂ ಭಕ್ತಿಯಿಂದ ಎಲ್ಲರೂ ಮುಕ್ತಿ ಪಡೆಯಲು ಸಾಧ್ಯ ಎಂಬುದನ್ನು ಸಾರಿದರು. ಹೀಗೆ ಪ್ರಭುತ್ವ ವ್ಯವಸ್ಥೆಯಲ್ಲಿದ್ದುಕೊಂಡೇ ಅವರು ಅಷ್ಟೆಲ್ಲಾ ಸುಧಾರಣೆಗಳನ್ನು ತಂದಿದ್ದಾರೆಂದರೆ ಇಂದು ಸಮಾಜದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಇದ್ದರೂ ಜೊತೆಗೆ ಎಲ್ಲಾ ಅನುಕೂಲಗಳಿದ್ದರೂ ಏನಾಗುತ್ತಿದೆ? ಅದೇ ಸಮಸ್ಯೆಗಳನ್ನು ಇಂದಿಗೂ ಕಾಣುತ್ತಿದ್ದೇವೆ, ಅವು ಎಷ್ಟರಮಟ್ಟಿಗೆ ಸುಧಾರಣೆಯಾಗಿದೆ? ಎಂಬುದನ್ನು ಮೊದಲು ಮನಗಾಣಬೇಕು. ಆದ ಕಾರಣ ನಮ್ಮ ಕನ್ನಡ ಸಾಹಿತ್ಯದಲ್ಲಿ ಇಂದಿಗೂ ಅಂತಹ ಬರವಣಿಗೆಗಳು, ಚಳುವಳಿಗಳು ನಡೆದು ಎಲ್ಲರೂ ಸಮಾನತೆ, ಸಾಮರಸ್ಯ ಬದುಕು ಹಾಗೂ ಮಾನವೀಯ ಮೌಲ್ಯಗಳ ಮುಖಾಂತರ ಉತ್ತಮ ಜೀವನವನ್ನು ನಡೆಸಬೇಕೆಂಬುದು ಈ ಲೇಖನದ ಆಶಯವಾಗಿದೆ.

## KEYWORDS:

ವಚನ, ಸ್ತರ, ಮತಾಂಧತೆ, ವೈಚಾರಿಕ ಪ್ರಜ್ಞೆ, ಕಲ್ಯಾಣ ರಾಜ್ಯ, ದಾಸೋಹ, ಪ್ರಜಾಪ್ರಭುತ್ವ, ಸಮಾನತೆ.

**ಪೀಠಿಕೆ:**

ಕನ್ನಡ ಸಾಹಿತ್ಯದಲ್ಲಿ ಪ್ರಾಚೀನ ಕಾಲದಿಂದ ಇಂದಿನವರೆಗೆ ಚಳುವಳಿಗಳು ಎಂದು ನೋಡಿದಾಗ ಅದು ಪಂಪನಿಂದಲೇ ಆರಂಭವಾಗಿರುವುದನ್ನು ಗಮನಿಸಬಹುದು. ಆತ ಬಂಡಾಯದ ದನಿ ಎತ್ತಿದ ಮೊದಲ ಕವಿಯಾಗಿದ್ದಾನೆ. ನಂತರ ಕ್ರಿ.ಶ.12ನೇ ಶತಮಾನದ ವಚನ ಸಾಹಿತ್ಯದಲ್ಲಿ ಆದ ಚಳುವಳಿಯನ್ನು ನಿಜವಾದ ಸಾಮಾಜಿಕ ಚಳುವಳಿ ಎಂದೇ ಹೇಳಲಾಗಿದೆ. ವಚನ ಸಾಹಿತ್ಯದಿಂದ ಇದುವರೆಗೂ ಅರಮನೆಯಲ್ಲಿ ಪಂಡಿತಮಾನ್ಯರಿಗೆ ಮಾತ್ರ ಸೀಮಿತವಾಗಿದ್ದ ಸಾಹಿತ್ಯ ಜನಸಾಮಾನ್ಯರ ಮನೆಯ ಅಂಗಳಕ್ಕೂ ಬಂದಿತು ಎನ್ನಬಹುದು. ಕವಿಗಳು ಭಾವನೆಯನ್ನು ಕಲಾತ್ಮಕಗೊಳಿಸಲು ಹೊರಟರೆ, ಶಿವಶರಣರು ಜೀವನವನ್ನೇ ಕಲಾತ್ಮಕಗೊಳಿಸಲು ಹೊರಟವರು. ಈ ಕಾರಣಕ್ಕಾಗಿಯೇ ವಚನ ಸಾಹಿತ್ಯ ಹುಟ್ಟಿಕೊಂಡಿದ್ದು. ಸಾಮಾನ್ಯವಾಗಿ ವಚನ ಎಂದರೆ ಮಾತು, ಪ್ರಮಾಣ ಎಂದರ್ಥ ಆದರೆ ಸಾಹಿತ್ಯದಲ್ಲಿ 'ಪದ್ಯಗಂಧಿ ಗದ್ಯ ಸಾಹಿತ್ಯ' ಎಂಬ ಅರ್ಥವನ್ನು ಕಾಣಬಹುದು. ಇದು ಜನರ ಆಡು ಭಾಷೆಯಲ್ಲಿ ರಚಿಸಿದ ಮೊದಲ ಸಾಹಿತ್ಯವಾಗಿದೆ. ಇದು ಪ್ರಮುಖವಾಗಿ ಭಕ್ತಿ ಚಳುವಳಿಯಾದರೂ ಸಮಾಜದ ಓರೆ ಕೋರೆಗಳನ್ನು ತಿದ್ದುವ ಸಾಮಾಜಿಕ ಚಳುವಳಿ ಕೂಡ ಆಗಿತ್ತು. ಇಲ್ಲಿ ಎಲ್ಲಾ ಸ್ತರದ ಜನರೂ ಇದ್ದರು. ಜೇಡರ ದಾಸಿಮಯ್ಯ, ಅಲ್ಲಮ ಪ್ರಭು, ಬಸವಣ್ಣ, ಚೆನ್ನಬಸವಣ್ಣ, ಅಕ್ಕಮಹಾದೇವಿ ಮುಂತಾದವರು ಪ್ರಮುಖ ವಚನಕಾರರಾಗಿದ್ದಾರೆ. ಇವರು ತಮ್ಮ ಸಮಕಾಲೀನ ಸಮಾಜದ ಸಮಸ್ಯೆಗಳಾದಂತಹ ವರ್ಗಸಂಘರ್ಷ, ಜಾತಿ ವ್ಯವಸ್ಥೆ, ಮೇಲು-ಕೀಳು, ಬಡವ-ಬಲ್ಲಿದ, ಲಿಂಗ ತಾರತಮ್ಯ, ಮತಾಂಧತೆ, ಮೂಢನಂಬಿಕೆಗಳು ಮುಂತಾದವುಗಳ ವಿರುದ್ಧ ಹೋರಾಡಿ ಎಲ್ಲರೂ ಸಮಾನರು, ಸಾಮರಸ್ಯದಿಂದ ಬದುಕಬೇಕು, ಕಾಯಕವೇ ಕೈಲಾಸ ಎಂದು ಸಾರಿದರು. ಹೀಗೆ ಸು.800 ವರ್ಷಗಳ ಹಿಂದೆಯೇ ವಚನ ಸಾಹಿತ್ಯದಲ್ಲಿ ಕಂಡಂತಹ ವೈಚಾರಿಕ ಪ್ರಜ್ಞೆಗಳು ಇಂದಿಗೂ ಪ್ರಸ್ತುತವಾಗಿವೆ. ಅವುಗಳನ್ನು ಪ್ರಸ್ತಾಪಿಸುವುದು ಈ ಲೇಖನದ ಉದ್ದೇಶವಾಗಿದೆ.

ಬಸವಣ್ಣ:

ಕನ್ನಡ ಸಾಹಿತ್ಯದಲ್ಲಿ ಆದ ಮೊದಲ ಸಮಾಜೋಧಾರ್ಮಿಕ ಚಳುವಳಿ ಎಂದರೆ ವಚನ ಸಾಹಿತ್ಯದಲ್ಲಿ ಆದ ಚಳುವಳಿ. ಇದರ ನಾಯಕ ಬಸವಣ್ಣ. ಇವರು ತಮ್ಮ ವ್ಯಕ್ತಿತ್ವ ಹಾಗೂ ಸಮಾಜವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದ ಯುಗಪುರುಷರಾಗಿದ್ದಾರೆ. 'ಕಲ್ಯಾಣ ರಾಜ್ಯ'ವನ್ನು ಕಟ್ಟಬೇಕೆಂಬುದು ಬಸವಣ್ಣನವರ ಮುಖ್ಯ ಗುರಿಯಾಗಿತ್ತು. ಅದಕ್ಕಾಗಿ ಅವರು ಎರಡು ಮಾರ್ಗವನ್ನು ಕಂಡುಕೊಂಡಿದ್ದರು. ಒಂದು ಕಾಯಕ, ಮತ್ತೊಂದು ದಾಸೋಹ. ಅಂದರೆ ಶ್ರಮಪಟ್ಟು ಕೆಲಸ ಮಾಡಬೇಕು, ಬಂದ ಹಣವನ್ನು

ದಾಸೋಹ ಮಾಡಲು ಬಳಸಬೇಕು ಎಂಬುದು ಅವರ ಆಶಯವಾಗಿತ್ತು.

ಬಸವಣ್ಣನವರು ಅನ್ನದಾಸೋಹ ಮಾಡುವ ಮೂಲಕ ಸಮಾಜದಲ್ಲಿ ಎಲ್ಲರೂ ಸಮಾನತೆ, ಸಾಮರಸ್ಯದಿಂದ ಬದುಕಬೇಕೆಂಬುದನ್ನು ತೋರಿಸಿಕೊಟ್ಟರು ಹಾಗೂ ಕಾಯಕ ಮಾಡುವುದರ ಮೂಲಕ ಕಾಯಕವೇ ಕೈಲಾಸ ಎಂದು ಸಾರಿದರು. ಆಧುನಿಕ ಕಾಲದಲ್ಲಿಯೂ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯ ಸಂವಿಧಾನದಲ್ಲಿ ಸಮಾನತೆ, ಕಲ್ಯಾಣ ರಾಜ್ಯ ಎಂಬ ಪರಿಕಲ್ಪನೆಗಳನ್ನು ಕಾಣುತ್ತೇವೆ ಆದರೂ ಈ ಸಮಸ್ಯೆಗಳು ಬಗೆಹರಿಯುತ್ತಿಲ್ಲ. ಇದು ಸಾರ್ವಕಾಲಿಕ ಸಮಸ್ಯೆಯಾಗಿದೆ.

ಸಾಮಾಜಿಕ ಸಮಾನತೆ ಕಾಣಬೇಕಾದರೆ ಆರ್ಥಿಕ ಸಮಾನತೆ ಆಗಬೇಕೆಂಬುದು ಬಸವಣ್ಣನವರ ಒಂದು ಚಿಂತನೆಯಾಗಿತ್ತು. ಇದೇ ಚಿಂತನೆಯನ್ನು ಇಂದು ಕಾರ್ಲ್ ಮಾರ್ಕ್ಸ್‌ನ ಸಿದ್ಧಾಂತದಲ್ಲೂ ಕಾಣುತ್ತೇವೆ ಎಂದರೆ ಅದರ ಅನಿವಾರ್ಯತೆ ಎಷ್ಟಿದೆ ಎನ್ನುವುದನ್ನು ನಾವು ತಿಳಿಯಬೇಕು. ಭಂಡಾರದ ಮಂತ್ರಿಯಾಗಿದ್ದ ಬಸವಣ್ಣನವರು ಜಂಗಮರಿಗೆ ಅಂದರೆ ಪ್ರಜೆಗಳಿಗೆ ಹಣವನ್ನು ವಿನಿಯೋಗ ಮಾಡುತ್ತಿರುವುದನ್ನು ಕಂಡ ರಾಜ ಬಿಜ್ಜಳ ಆಕ್ಷೇಪಣೆ ಮಾಡುತ್ತಾನೆ. ಅದಕ್ಕೆ ಬಸವಣ್ಣನವರು, 'ತಮ್ಮೊಡವೆಯಂ ತಾವೇ ಕೊಂಡರ್' ಎಂದು ಉತ್ತರಿಸುತ್ತಾರೆ. ಅಂದರೆ ಅವರ ಪ್ರಕಾರ ಪ್ರಜೆಗಳು ತೆರಿಗೆ ಕಟ್ಟುತ್ತಾರೆ, ಆ ಹಣವನ್ನು ಅವರಿಗಾಗಿಯೇ ವಿನಿಯೋಗ ಮಾಡಬೇಕೆಂಬುದು ಅವರ ಆಲೋಚನೆಯಾಗಿರಬಹುದು. ಇಂದು ಕೂಡ ಈ ತೆರಿಗೆಯ ಸಂಪನ್ಮೂಲ ಜನಸಾಮಾನ್ಯರಿಗಾಗಿಯೇ ಬಳಕೆಯಾಗಬೇಕಿರುವುದು ನ್ಯಾಯ ಸಮ್ಮತ.

ನಾವು ಇಂದು ಪ್ರಜಾಪ್ರಭುತ್ವ ಸರ್ಕಾರದಲ್ಲಿ ಕಾಣುತ್ತಿರುವ ಸಂಸತ್ತು ವ್ಯವಸ್ಥೆಯನ್ನು 12ನೇ ಶತಮಾನದ ಕಲ್ಯಾಣದಲ್ಲಿ ಬಸವಣ್ಣನವರು ಸ್ಥಾಪಿಸಿದ್ದ ಅನುಭವ ಮಂಟಪದ ವ್ಯವಸ್ಥೆಯಲ್ಲಿಯೇ ಕಾಣುವುದನ್ನು ಅನೇಕ ವಿದ್ವಾಂಸರು ಮತ್ತೆ ಮತ್ತೆ ಗುರುತಿಸಿ ಹೇಳಿರುವುದನ್ನು ಇಲ್ಲಿ ಸ್ಮರಿಸಬಹುದು.

ಸೃಷ್ಟಿಯ ಸಕಲ ಜೀವಿಗಳಲ್ಲೂ ದಯೆಯನ್ನು ತೋರಿಸಬೇಕೆಂದು ಅಂದೇ ಬಸವಣ್ಣನವರು 'ದಯೆಯೇ ಧರ್ಮದ ಮೂಲವಯ್ಯ' ಎಂದು ಸಾರಿದರು. ಇದು ಇಂದಿಗೂ ಅನ್ವಯಿಸುತ್ತದೆ. ಆಧುನಿಕ ಕಾಲದಲ್ಲಿಯೂ ಯಾವುದೇ ಧರ್ಮವನ್ನು ಗಮನಿಸಿದರೂ ಎಲ್ಲಾ ಧರ್ಮಗಳ ಮೂಲ ಮಂತ್ರ ದಯೆಯೇ ಆಗಿದೆ.

**ದಯವಿಲ್ಲದ ಧರ್ಮವದೇವುದಯ್ಯ?**
**ದಯವೇ ಬೇಕು ಸರ್ವಪ್ರಾಣಿಗಳೆಲ್ಲರಲ್ಲಿ**
**ದಯವೇ ಧರ್ಮದ ಮೂಲವಯ್ಯಾ,**
**ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ**[1]

ಮನುಷ್ಯನಲ್ಲಿರುವ ಸಹಾನುಭೂತಿ, ಕ್ಷಮೆ, ಕರುಣೆ ಹಾಗೂ ಪರೋಪಕಾರ ಗುಣಗಳೇ ದಯೆ. ದಯೆಯೇ ಇಲ್ಲದ ಧರ್ಮ ಅದ್ಯಾವುದಿದೆ. ಸಕಲ ಪ್ರಾಣಿಗಳಲ್ಲೂ ಈ ದಯೆ ಅನ್ನುವುದು ಇರಬೇಕು. ಎಲ್ಲಾ ಧರ್ಮದ ಮೂಲ ಮಂತ್ರ ದಯೆಯೇ ಆಗಿದೆ ಎಂದು ಬಸವಣ್ಣನವರು ಹೇಳುತ್ತಾರೆ. ಈಗಲೂ ನಡೆಯುತ್ತಿರುವ ಧರ್ಮದ ಸಂಘರ್ಷಗಳು ದಯೆಯ ಲುಪ್ತತೆಯನ್ನು ಎತ್ತಿ ತೋರಿಸುವಂತಿವೆ. ಧರ್ಮಕ್ಕೆ ದಯೆಯೇ ಮೂಲ ಎನ್ನುವ ಅಂಶ ಎಷ್ಟು ಅನಿವಾರ್ಯ ಎಂಬುದನ್ನು ಪರ್ಯಾಲೋಚಿಸಬೇಕು.

ಬಸವಣ್ಣನವರ ಆತ್ಮವಿಮರ್ಶೆ, ಸಮಾಜವಿಮರ್ಶೆ ಹಾಗೂ ಲೋಕಕ್ಕೆ ಸಂದೇಶ ನೀಡುವ ವಚನಗಳನ್ನು ಗಮನಿಸಿದಾಗ ಅವು ಆಧುನಿಕ ಸಾಹಿತ್ಯದಲ್ಲಿ ನವ್ಯ, ಬಂಡಾಯ, ಭಾವಗೀತೆಯ ಕಾವ್ಯಗಳಂತೆ ಕಾಣುತ್ತದೆ. ಇದನ್ನು ಕೆಲವು ವಚನಗಳ ಮೂಲಕ ಹೀಗೆ ಉದಾಹರಿಸಬಹುದು.

ಬಸವಣ್ಣನವರು ವರ್ಣ ವ್ಯವಸ್ಥೆಯಲ್ಲಿ ಮೇಲು-ಕೀಳೆಂಬ ಭಾವನೆಯನ್ನು ತೊಡೆದು ಹಾಕಿ ಜಾತ್ಯತೀತ ಸಮಾಜವನ್ನಾಗಿ ಮಾಡಲು ಮುಂದಾದರು. ಇದಕ್ಕೆ ನಿದರ್ಶನವನ್ನಾಗಿ ಹರಳಯ್ಯ ಮತ್ತು ಮಧುವಯ್ಯರ ಮಕ್ಕಳ ಮದುವೆಯ ಘಟನೆಯನ್ನು ತೆಗೆದುಕೊಳ್ಳಬಹುದು. ಜಾತಿ ವ್ಯವಸ್ಥೆಯನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಅಂತರ್ಜಾತಿಯ ವಿವಾಹ ಮಾಡಿದ ಬಸವಣ್ಣನವರ ಪ್ರಯತ್ನ ಕ್ರಾಂತಿಕಾರಿಯಾದದ್ದು. ಜಾತಿ ವಿನಾಶದ ಪ್ರಯತ್ನವಾಗಿ ಇಂದೂ ಅಂತರಜಾತಿ ವಿವಾಹಗಳು ಜರಗುತ್ತಿರುವುದು ಒಂದು ಧನಾತ್ಮಕವಾದ ಬೆಳವಣಿಗೆಯಾಗಿ ತನ್ನ ಪ್ರಸ್ತುತತೆಯನ್ನು ಎತ್ತಿ ತೋರುತ್ತಿದೆ.

ಈ ರೀತಿಯ ವರ್ಣ ವ್ಯವಸ್ಥೆಯನ್ನು ತೊಡೆದು ಹಾಕಲು ಬಸವಣ್ಣನವರು ಹೋರಾಡಿದರಲ್ಲದೆ ಅವರು ತಮ್ಮ ವಚನಗಳ ಮೂಲಕವೂ ಸಮಾನತೆ ತರಲು ಪ್ರಯತ್ನಿಸಿದ್ದಾರೆ. ಅದರಲ್ಲಿನ ಒಂದು ವಚನ ಹೀಗಿದೆ,

**ನೆಲನೊಂದೆ: ಹೊಲಗೇರಿ ಶಿವಾಲಯಕ್ಕೆ,**
**ಜಲ ಒಂದೇ: ಶೌಚಾಚಮನಕ್ಕೆ,**
**ಕುಲವೊಂದೇ ತನ್ನ ತಾವರಿದವಂಗೆ,**
**ಫಲವೊಂದೇ ಷಡುದರುಶನ ಮುಕ್ತಿಗೆ,**
**ನಿಲುವೊಂದೆ ಕೂಡಲಸಂಗಮದೇವಾ, ನಿಮ್ಮ ನರಿದವಂಗೆ**[2]

ನಾವು ಆಚರಿಸುವ ಒಳ್ಳೆಯ ಆಚರಣೆಗಳಿಂದ ಒಳ್ಳೆಯವರು, ಕೆಟ್ಟವರು ಅನ್ನಿಸಿಕೊಳ್ಳುತ್ತೇವೆಯೇ ಹೊರತು ಕುಲದಿಂದಲ್ಲ. ಈ ಭೂಮಿ ಒಂದೇ ಇರೋದು, ಅಲ್ಲಿ ಶಿವ ದೇವಾಲಯ ಕಟ್ಟಿದರೆ ಪುಣ್ಯಕ್ಷೇತ್ರವಾಗುತ್ತದೆ. ದುರ್ನಡತೆಯುಳ್ಳವರ ಸ್ಥಳವಾದರೆ ಹೊಲಗೇರಿ ಆಗುತ್ತದೆ. ನೀರು ಒಂದೇ, ಅದನ್ನು ಪೂಜಾ ಕಾರ್ಯಕ್ಕೆ

ಬಳಸಿದರೆ ತೀರ್ಥವಾಗುತ್ತದೆ. ಶೌಚಾಲಯಕ್ಕೆ ಬಳಸಿದರೆ ಕೊಳಕು ನೀರಾಗುತ್ತದೆ. ಅದೇ ರೀತಿ ಕುಲ ಅನ್ನುವುದು ಒಂದೇ. ಜ್ಞಾನದ ಬಲದಿಂದ ತನ್ನನ್ನು ತಾನು ಅರಿಯುತ್ತಾರೋ ಅವರು ಉತ್ತಮ, ಅರಿಯದವರು ನೀಚರು. ಎಲ್ಲಾ ಜಾತಿಗಳ ಗುರಿಯೂ ಒಂದೇ, ಅದೇ ಮೋಕ್ಷ ಎಂದಿರುವ ಬಸವಣ್ಣನವರು ಇಲ್ಲಿ ಜಾತಿ ವ್ಯವಸ್ಥೆಯನ್ನು ತೆಗೆದುಕೊಂಡು ಸಮಾಜ ವಿಮರ್ಶೆ ಮಾಡಿದ್ದಾರೆ.

ಅದೇ ರೀತಿ, 'ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ' ಎಂದು ಸ್ವ ವಿಮರ್ಶೆ ಮಾಡಿಕೊಳ್ಳುತ್ತಾರೆ. 'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ' ಹಾಗೂ 'ಲೋಕದ ಡೊಂಕ ನೀವೇಕೆ ತಿದ್ದುವಿರಿ?' ಎಂದು ಲೋಕಕ್ಕೆ ಸಂದೇಶವನ್ನು ಕೊಡುವುದನ್ನು ಕಾಣುತ್ತೇವೆ.

ಅಲ್ಲಮಪ್ರಭುದೇವರು:

ವಚನ ಚಳುವಳಿಯ ನೇತಾರರಾದ ಬಸವಣ್ಣನವರೊಂದಿಗೆ ಹೋರಾಡಲು ಹೆಗಲುಕೊಟ್ಟ ಶಿವಶರಣರಲ್ಲಿ ಅಲ್ಲಮ ಪ್ರಭುದೇವರು ಪ್ರಮುಖರಾದವರು. ಕಲ್ಯಾಣ ರಾಜ್ಯ ಕಟ್ಟಬೇಕೆಂಬ ಆಶಯದಿಂದ ಅನುಭವ ಮಂಟಪದಲ್ಲಿ ನಡೆಯುತ್ತಿದ್ದ ಚರ್ಚೆಯಲ್ಲಿ ಅಲ್ಲಮರು ಕೇಂದ್ರ ವ್ಯಕ್ತಿಯಾಗಿದ್ದರು. ಇವರ ವಚನಗಳು ಆಧ್ಯಾತ್ಮಿಕ, ವೈಚಾರಿಕತೆ ಹಾಗೂ ಯೌಗಿಕ ನಿಲುವಿಗೆ ಸಂಬಂಧಿಸಿದವಾಗಿವೆ. ಗುರು ಶಿಷ್ಯರ ಸಂಬಂಧ ಕುರಿತು ಇವರ ಒಂದು ವಚನ ಹೀಗಿದೆ,

**ಕೃತಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದಡೆ**
**ಆಗಲಿ ಮಹಾಪ್ರಸಾದವೆಂದೆನಯ್ಯಾ,**
**ತ್ರೇತಾಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದಡೆ**
**ಆಗಲಿ ಮಹಾಪ್ರಸಾದವೆಂದೆನಯ್ಯಾ,**
**ದ್ವಾಪರದಲ್ಲಿ ಶ್ರೀ ಗುರು ಶಿಷ್ಯಂಗೆ ಝುಂಕಿಸಿ ಬುದ್ಧಿಯ ಕಲಿಸಿದಡೆ**
**ಆಗಲಿ ಮಹಾಪ್ರಸಾದವೆಂದೆನಯ್ಯಾ.**
**ಕಲಿಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದಡೆ**
**ಆಗಲಿ ಮಹಾಪ್ರಸಾದವೆಂದೆನೆಯ್ಯಾ.**
**ಗುಹೇಶ್ವರ ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾನು ಬೆರಗಾದೆನು**[3]

ಇಲ್ಲಿ ಗುರು ಶಿಷ್ಯರ ನಡುವೆ ಇರುವ ಗೌರವ ಭಾವನೆಯನ್ನು ತಿಳಿಸಲಾಗಿದೆ. ಅಲ್ಲಮಪ್ರಭುಗಳು ಒಂದೊಂದು ಯುಗ ಕಳೆದಂತೆ ಮನುಷ್ಯರಲ್ಲಿ ಅರಿವು ಹೆಚ್ಚಾಗಿ ಅವರ ನಡೆನುಡಿಗಳಲ್ಲಿ ಮಾನವೀಯ ಗುಣಗಳು ಹೆಚ್ಚಾಯಿತು ಎಂಬುದನ್ನು ಗುರು ಶಿಷ್ಯರ ಸಂಬಂಧದ ಮೂಲಕ ಅಭಿವ್ಯಕ್ತಪಡಿಸಿದ್ದಾರೆ. ಗುರುವಾದವನು ಶಿಷ್ಯನಿಗೆ ಕೃತಯುಗದಲ್ಲಿ ಹೊಡೆದು, ತ್ರೇತಾಯುಗದಲ್ಲಿ ಬೈದು, ದ್ವಾಪರಯುಗದಲ್ಲಿ ಗದರಿಸಿ, ಕಲಿಯುಗದಲ್ಲಿ ವಂದಿಸಿ ಬುದ್ಧಿಯನ್ನು ಕಲಿಸುತ್ತಿದ್ದನು ಎಂದಿದ್ದಾರೆ. ಹಾಗೆಯೇ

ಹಿಂದೆ ಗುರುಕೇಂದ್ರಿತವಾದ ಶಿಕ್ಷಣವು, ಕಾಲಕಳೆದಂತೆ ಇಂದು ವಿದ್ಯಾರ್ಥಿಕೇಂದ್ರಿತ ಶಿಕ್ಷಣವಾಗಿರುವುದನ್ನು ಗಮನಿಸಬಹುದು.

ಅಕ್ಕಮಹಾದೇವಿ:

ವಚನ ಸಾಹಿತ್ಯದಲ್ಲಿ ಸ್ತ್ರೀವಾದಿ ಸಾಹಿತ್ಯವನ್ನು ಕಾಣುತ್ತೇವೆ. ಪುರುಷರಷ್ಟೇ ಸ್ತ್ರೀಯರಿಗೂ ಕೂಡ ಅಭಿವ್ಯಕ್ತಿ ಸ್ವಾತಂತ್ರ್ಯದಲ್ಲಿ ಸಮಾನ ಅವಕಾಶ ಲಭಿಸಿತ್ತು. ಹಲವಾರು ಶಿವಶರಣೆಯರು ಕೂಡ ವಚನಗಳ ಮೂಲಕ ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕ ಮುಂತಾದ ಕ್ಷೇತ್ರಗಳ ಬಗ್ಗೆ ತಮ್ಮ ಚಿಂತನೆಗಳನ್ನು ಅಭಿವ್ಯಕ್ತ ಪಡಿಸಿದ್ದಾರೆ. ಅವರಲ್ಲಿ ಅಕ್ಕಮಹಾದೇವಿ ಪ್ರಮುಖ ಶಿವಶರಣೆ. ಅವರು,

**ಬೆಟ್ಟದ ಮೇಲೊಂದು ಮನೆಯ ಮಾಡಿ,**
**ಮೃಗಗಳಿಗಂಜಿದಡೆಂತಯ್ಯಾ?**
**ಸಮುದ್ರದ ತಡಿಯಲೊಂದು ಮನೆಯ ಮಾಡಿ,**
**ನೊರೆತೆರೆಗಳಿಗಂಜಿದಡೆಂತಯ್ಯಾ?**
**ಸಂತೆಯೊಳಗೊಂದು ಮನೆಯ ಮಾಡಿ,**
**ಶಬ್ದಕ್ಕೆ ನಾಚಿದಡೆಂತಯ್ಯಾ?**
**ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ,**
**ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ**
**ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು**[4]

ಎಂದಿದ್ದಾರೆ. ಅಂದರೆ, ಈ ಭೂಮಿಯ ಮೇಲೆ ಹುಟ್ಟಿದ ಪ್ರತಿಯೊಬ್ಬ ವ್ಯಕ್ತಿಗೂ ಜೀವನದಲ್ಲಿ ಕಷ್ಟ-ನಷ್ಟಗಳು, ನೋವು, ಅವಮಾನಗಳು ಎದುರಾಗುತ್ತದೆ. ಅದನ್ನು ಧೈರ್ಯದಿಂದ ಎದುರಿಸಬೇಕೇ ಹೊರತು ಓಡಿ ಹೋಗಬಾರದು. ಹೆದರದೆ, ಕುಗ್ಗದೆ ಸಮಚಿತ್ತದಿಂದ ಜೀವನವನ್ನು ನಡೆಸಬೇಕು ಎಂದು ಅಕ್ಕಮಹಾದೇವಿಯವರು ಹೇಳುತ್ತಾರೆ.

ಜೇಡರ ದಾಸಿಮಯ್ಯ:

ಅಂದಿನ ಕಾಲದಲ್ಲಿ ಇದ್ದ ಲಿಂಗ ತಾರತಮ್ಯವನ್ನು ಖಂಡಿಸಿ, ಎಲ್ಲರೂ ಸಮಾನರು ಎಂದು ಶಿವಶರಣ-ಶರಣೆಯರು ತಮ್ಮ ವಚನಗಳ ಮೂಲಕ ಸಮಾಜಕ್ಕೆ ಸಂದೇಶ ನೀಡಿದರು. ಅದಕ್ಕೆ ನಿದರ್ಶನವಾಗಿ ಜೇಡರ ದಾಸಿಮಯ್ಯರ ಒಂದು ವಚನ,

**ಮೊಲೆ ಮುಡಿ ಬಂದರೆ ಹೆಣ್ಣೆಂಬರು,**
**ಗಡ್ಡ ಮೀಸೆ ಬಂದರೆ ಗಂಡೆಂಬರು,**
**ನಡುವೆ ಸುಳಿವ ಆತ್ಮನು**
**ಹೆಣ್ಣೂ ಅಲ್ಲ, ಗಂಡೂ ಅಲ್ಲ ಕಾಣ! ರಾಮನಾಥ**[5]

ಅಂದರೆ, ಇಲ್ಲಿ ಗಂಡು ಹೆಣ್ಣು ಎಂಬ ಭೇದವನ್ನು ಬಾಹ್ಯ ಶರೀರದಲ್ಲಿ ಮಾತ್ರ

ನೋಡುತ್ತೇವೆ. ಆದರೆ ನಡುವೆ ಸುಳಿವ ಆತ್ಮಕ್ಕೆ ಈ ಭೇದವಿಲ್ಲ, ಇಬ್ಬರಲ್ಲಿಯೂ ನೆಲೆಸಿರುವ 'ಜೀವ' ಒಂದೇ ಹೊರತು ಬೇರೆಯಲ್ಲ. ಅದಕ್ಕೆ ರೂಪ ಕೂಡ ಇಲ್ಲ, ಇಬ್ಬರು ಸಮಾನರೇ ಎನ್ನುತ್ತಾ ಲಿಂಗ ತಾರತಮ್ಯವನ್ನು ತೊಡೆದು ಹಾಕಲು ಪ್ರಯತ್ನಿಸಿದ್ದಾರೆ. ಇದೇ ರೀತಿಯ ವಚನಗಳನ್ನು ಗೊಗ್ಗವೆ, ಆಯ್ದಕ್ಕಿಲಕ್ಕಮ್ಮ, ಸತ್ಯಕ್ಕ ಹಾಗೂ ಅಂಬಿಗರ ಚೌಡಯ್ಯರಲ್ಲೂ ಕಾಣುತ್ತೇವೆ. ಇದನ್ನು ಗಮನಿಸಿದಾಗ ಪ್ರಸ್ತುತದಲ್ಲಿಯೂ ಪ್ರಜಾಪ್ರಭುತ್ವ ಸರ್ಕಾರದ ಸಂವಿಧಾನದಲ್ಲಿ ನೀಡಿರುವ ಲಿಂಗಸಮಾನತೆ, ಸ್ತ್ರೀ ಸ್ವಾತಂತ್ರ್ಯವನ್ನು ಹಾಗೂ ಆಧುನಿಕ ಸಾಹಿತ್ಯದಲ್ಲಿ ಸ್ತ್ರೀವಾದಿ ಸಾಹಿತ್ಯವನ್ನು ಕಾಣುತ್ತೇವೆ.

ಆಯ್ದಕ್ಕಿ ಮಾರಯ್ಯ:

ಶಿವಶರಣರು ಕಾಯಕಕ್ಕೆ ಬಹಳ ಮಹತ್ವ ಕೊಟ್ಟಿದ್ದರು. ಆಯ್ದಕ್ಕಿ ಮಾರಯ್ಯ, ಬಸವಣ್ಣ, ಸಿದ್ದರಾಮ ಮುಂತಾದವರು ಪ್ರಮುಖರಾಗಿದ್ದಾರೆ. ಸಿದ್ದರಾಮ ಕಾಯಕಯೋಗಿ ಎಂದೇ ಪ್ರಸಿದ್ಧರಾಗಿದ್ದರು. ಅಷ್ಟು ಪ್ರಾಮಾಣಿಕತೆ ನಿಷ್ಠೆಯಿಂದ ಕಾಯಕವನ್ನು ಮಾಡುವುದಲ್ಲದೆ, ಅದರ ಮಹತ್ವವನ್ನು ಶಿವಶರಣರು ಎತ್ತಿಹಿಡಿದಿದ್ದಾರೆ. ಪ್ರಸ್ತುತದಲ್ಲೂ ನಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ಮಾಡಬೇಕೆಂಬುದು ಧ್ವನಿತವಾಗುತ್ತದೆ. ಆಯ್ದಕ್ಕಿ ಮಾರಯ್ಯ ಅವರು,

**ಕಾಯಕದಲ್ಲಿ ನಿರತವಾದರೆ,**
**ಗುರುದರ್ಶನವಾದಡೂ ಮರೆಯಬೇಕು;**
**ಲಿಂಗಪೂಜೆಯಾದಡೂ ಮರೆಯಬೇಕು;**
**ಜಂಗಮ ಮುಂದಿದ್ದಡೂ ಹಂಗು ಹರಿಯಬೇಕು,**
**ಕಾಯಕವೇ ಕೈಲಾಸವಾದ ಕಾರಣ,**
**ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು**[6]

ಎನ್ನುತ್ತಾರೆ ಈ ವಚನದಲ್ಲಿ ಕಾಯಕದ ಮಹತ್ವವನ್ನು ಆಯ್ದಕ್ಕಿ ಮಾರಯ್ಯ ಹೇಳುತ್ತಾರೆ. ಕಾಯಕ ಮಾಡುವವನು ಗುರು ಬಂದರೂ, ಲಿಂಗ ಪೂಜೆಯ ಸಮಯವಾದರೂ, ಶರಣರು ಬಂದರೂ ತನ್ನ ಕೆಲಸವನ್ನು ಮೊದಲು ಮುಗಿಸಬೇಕು. ಇದೆಲ್ಲದಕ್ಕಿಂತ ಕಾಯಕವೇ ಮುಖ್ಯ, ಅದರಲ್ಲಿ ಅಷ್ಟು ತಲ್ಲೀನತೆ ಹಾಗೂ ಪೂಜ್ಯ ಭಾವನೆ ಇರಬೇಕು ಎನ್ನುತ್ತಾರೆ. ಕಾಯಕವೇ ಕೈಲಾಸ ಎಂಬುದು ಇವರ ಆಶಯವಾಗಿದೆ.

ಆಯ್ದಕ್ಕಿ ಮಾರಯ್ಯರ ಕೆಲಸ ಬಸವಣ್ಣನವರ ಮಹಾಮನೆಯ ಅಂಗಳದಿಂದ ಅಕ್ಕಿಯನ್ನು ಆಯ್ದು ತರುವುದು. ಒಂದು ದಿನ ಇವರು ಹೆಚ್ಚು ಅಕ್ಕಿಯನ್ನು ತಂದಾಗ, ಆತನ ಹೆಂಡತಿ ಆಯ್ದಕ್ಕಿಲಕ್ಕಮ್ಮ "ಈಸಕ್ಕಿಯಾಸೆ ನಿಮಗೇಕೆ?" ಎನ್ನುತ್ತಾರೆ. ಅಂದರೆ ಅಪರಿಗ್ರಹ (ಅಗತ್ಯಕ್ಕಿಂತ ಹೆಚ್ಚು ಸಂಗ್ರಹಿಸದೆ ಇರುವುದು) ಹಾಗೂ ಅತಿಯಾದ ಆಸೆ

ಇರಬಾರದು ಎಂಬ ಆಶಯದಿಂದ ಹೀಗೆ ಹೇಳುತ್ತಾರೆ. ಈ ಮೇಲೆ ಪ್ರಸ್ತಾಪಿಸಿದ ವಿಚಾರಗಳು ಅಂದು, ಇಂದು, ಎಂದಿಗೂ ಎಲ್ಲರಿಗೂ ಆದರ್ಶಪ್ರಾಯವಾದದ್ದು.

ನಗೆಯಮಾರಿತಂದೆ:

ವಚನ ಸಾಹಿತ್ಯದಲ್ಲಿ ಶಿವಶರಣರು ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕ ವಿಚಾರಗಳಲ್ಲದೆ ವೈಜ್ಞಾನಿಕ, ತಾತ್ವಿಕ ವಿಚಾರಗಳಿಗೂ ಸಂಬಂಧಿಸಿದಂತೆ ಚಿಂತನೆ ಮಾಡಿದ್ದಾರೆ. ನಿದರ್ಶನಕ್ಕಾಗಿ ನಗೆಯ ಮಾರಿತಂದೆಯ ಒಂದು ವಚನ,

**ಬೀಜ ಒಡೆದು ಮೊಳೆಯಂಕುರಿಸುವಾಗ ಎಲೆ ಎಲ್ಲಿದ್ದಿತ್ತು?**
**ಎಲೆ ಸುಳಿಬಿಟ್ಟು ಕವಲುವಾಗ ಶಾಖೆಯೆಲ್ಲಿದ್ದಿತ್ತು?**
**ಶಾಖೆ ಒಡೆದು ಕುಸುಮ ತೋರುವಾಗ ಫಲವೆಲ್ಲಿದ್ದಿತು?**
**ಫಲ ಬಲಿದು ರಸ ತುಂಬುವಾಗ ಸವಿಯಲ್ಲಿದ್ದಿತ್ತು?**
**ಸವಿಯ ಸವಿದು ಪರಿಣತೆಗೊಂಡಾಗ ಅದೇತರೊದಗು?**
**ಇಷ್ಟರ ನೀತಿಯನರಿ, ಆತುರವೈರಿ ಮಾರೇಶ್ವರಾ**[7]

ನಗೆಯ ಮಾರಿತಂದೆ ಇಲ್ಲಿ ವೃಕ್ಷದ ಮೂಲವಾದ ಬೀಜದ ವಿಕಾಸವನ್ನು ಪ್ರಶ್ನಿಸುವ ಮೂಲಕ ಅದೆಲ್ಲವೂ ಬೀಜದಲ್ಲೇ ಅಡಗಿದೆ ಎಂದು ವಿವರಿಸಿದ್ದಾರೆ. ಇದೇ ರೀತಿ ಸೃಷ್ಟಿಯ ಪ್ರತಿಯೊಂದು ಜೀವಿ, ವಸ್ತುಗಳಲ್ಲೂ ಆಗುವುದನ್ನು ಗಮನಿಸಿದರೆ ಅಚ್ಚರಿಯಾಗುತ್ತದೆ. ಆಧುನಿಕ ಕಾಲದಲ್ಲಿ ಕಾಣುವ ಇಂಥ ವೈಜ್ಞಾನಿಕ ವಿಚಾರಗಳ ಬಗ್ಗೆ ಅಂದೇ ಸೂಕ್ಷ್ಮ ಅವಲೋಕನ ಮಾಡಿರುವುದು ಸೋಜಿಗವೆನಿಸುತ್ತದೆ.

ಕರಣ ಹಸುಗೆಯಲ್ಲಿ ದೇಹದ ರಚನೆ, ಮನಸ್ಸಿನ ವ್ಯಾಪಾರ, ಇಂದ್ರಿಯಾದಿಗಳ ಕಾರ್ಯ, ಸಪ್ತವ್ಯಸನಗಳು, ಷಡೂರ್ಮಿಗಳು ಮುಂತಾದವನ್ನೆಲ್ಲ ವಿಸ್ತಾರವಾಗಿ ಆತನು ವರ್ಣಿಸಿದ್ದಾನೆ. ಷಟ್ಸ್ಥಲಕ್ಕೆ ಪೀಠಿಕೆಯಾಗಿ ಪರವಸ್ತುವಿನ ಸ್ವರೂಪ, ನಿಷ್ಕಲ, ಸಕಲ ನಿಷ್ಕಲ ಮತ್ತು ಸಕಲಗಳನ್ನೂ ಸಾದಾಖ್ಯಗಳನ್ನೂ, ಮೂವತ್ತಾರು ತತ್ವಗಳನ್ನೂ ವಿವರಿಸಿ, ಅಂಗದ ಉತ್ಪತ್ತಿ ಪ್ರವೃತ್ತಿ ಮಾರ್ಗದಲ್ಲಿ ದೇಹೋಪಾಧಿಗಳು ಬಂದು ಸೇರುವ ಕ್ರಮ, ನಿವೃತ್ತಿ ಮಾರ್ಗದಲ್ಲಿ ಅವುಗಳಿಂದ ಬಿಡುಗಡೆ ಹೊಂದುವ ಕ್ರಮ– ಇವುಗಳನ್ನೆಲ್ಲ ತಿಳಿಸಿದ್ದಾನೆ.[8] (ವಚನ ಧರ್ಮಸಾರ, ಎಂ. ಆರ್. ಶ್ರೀನಿವಾಸಮೂರ್ತಿ, ಪುಟ ಸಂಖ್ಯೆ 62).

ಇಂತಹ ವಿಚಾರಗಳನ್ನು ಅಂದರೆ ದೇಹದ ಅಂಗರಚನೆ ಬಗ್ಗೆ, ಮನಸ್ಸಿನ ಬಗ್ಗೆ, ಪಂಚಕೋಶಗಳು, ಪಂಚವಾಯುಗಳು, ತ್ರಿಕರಣಗಳು ಹಾಗೂ ಜೀವಿಗಳ ಮೂಲದ ಬಗ್ಗೆ ವೈಜ್ಞಾನಿಕ ದೃಷ್ಟಿಕೋನದಿಂದ ಶಿವಶರಣರು ಚಿಂತಿಸಿರುವುದು ಅವರ ಜ್ಞಾನಕ್ಕೆ ಹಿಡಿದ ಕನ್ನಡಿಯಂತಿದೆ.

ಉಪಸಂಹಾರ:

ಈ ಮೇಲಿನ ವಿಚಾರಗಳನ್ನು ಅವಲೋಕಿಸಿದಾಗ ಆಧುನಿಕ ಕಾಲದಲ್ಲಿ ಕಾಣುವ ಚಿಂತನಾಲಹರಿಗಳು, 800 ವರ್ಷಗಳ ಹಿಂದೆಯೇ ವಚನಕಾರರು ಈ ರೀತಿಯ ಚಿಂತನೆಗಳನ್ನು ಮಾಡಿ ಅಂದಿನ ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸಿದ್ದರು. ಹಾಗೂ ಅಲ್ಲಿನ ಆರ್ಥಿಕ, ಸಾಮಾಜಿಕ, ಆಧ್ಯಾತ್ಮಿಕ, ವೈಜ್ಞಾನಿಕ, ತತ್ವಶಾಸ್ತ್ರ ಮುಂತಾದವುಗಳ ಬಗ್ಗೆ ಅವರಿಗೆ ಇದ್ದ ವೈಚಾರಿಕ ಪ್ರಜ್ಞೆಯನ್ನು ಗಮನಿಸಿದರೆ ಆಶ್ಚರ್ಯಕರವಾಗುತ್ತದೆ. ಅಷ್ಟರಮಟ್ಟಿಗೆ ಅವರ ಜ್ಞಾನವನ್ನು ವಿಕಸಿಸಿಕೊಂಡಿದ್ದರು. ಒಟ್ಟಾರೆ ಶಿವಶರಣರು ಹೇಳಿದ ನಿತ್ಯ ಸತ್ಯಗಳು ಅಂದಿಗೂ ಇಂದಿಗೂ ಸಾರ್ವಕಾಲಿಕವಾದದ್ದು. ಅವರು ಅಂದು ರಾಜಪ್ರಭುತ್ವದಲ್ಲಿ ಇದ್ದುಕೊಂಡೇ ಅಷ್ಟೆಲ್ಲಾ ಪ್ರಯತ್ನ ಹೋರಾಟಗಳು ಮಾಡಿರುವಾಗ, ಇಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ಇದ್ದರೂ ಹಲವು ಸಮಸ್ಯೆಗಳು ಇನ್ನೂ ಬಗೆಹರಿಯದೆ ಉಳಿದಿವೆ. ಅವುಗಳ ಬಗ್ಗೆ ನಮ್ಮ ಸರ್ಕಾರ ಸರಿಯಾದ ಕ್ರಮ ಹಾಗೂ ಆಧುನಿಕ ಸಾಹಿತ್ಯದಲ್ಲಿ ಮತ್ತಷ್ಟು ಹೋರಾಟಗಳು ನಡೆದು ಜನರು ಮೌಲ್ಯಯುತ ಸಾಮರಸ್ಯದ ಬದುಕನ್ನು ನಡೆಸುವಂತಾಗಲಿ ಎಂಬುದು ಈ ಲೇಖನದ ಆಶಯವಾಗಿದೆ.

**ಕೊನೆ ಟಿಪ್ಪಣಿಗಳು:**

1. ಕಲಬುರ್ಗಿ ಎಂ.ಎಂ. (ಸಂ), (1993), ಸಮಗ್ರ ವಚನ ಸಂಪುಟ: ಒಂದು; ಬಸವಣ್ಣನವರ ವಚನ ಸಂಪುಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ವಚನ ಸಂಖ್ಯೆ. 247, ಪು.ಸಂ. 61
2. ಅದೇ, ವಚನ ಸಂಖ್ಯೆ. 879, ಪು.ಸಂ. 229
3. ಮಲ್ಲಾಪುರ ಬಿ.ವಿ. (ಸಂ), (1993). ಸಮಗ್ರ ವಚನ ಸಂಪುಟ: ಎರಡು; ಅಲ್ಲಮ ಪ್ರಭುದೇವರ ವಚನ ಸಂಪುಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ವಚನ ಸಂಖ್ಯೆ. 52, ಪು. ಸಂ. 16
4. ವೀರಣ್ಣ ರಾಜೂರ (ಸಂ), (1993), ಸಮಗ್ರ ವಚನ ಸಂಪುಟ: ಐದು; ಶಿವಶರಣೆಯರ ವಚನ ಸಂಪುಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ವಚನ ಸಂಖ್ಯೆ. 253, ಪು.ಸಂ. 78
5. ವಿದ್ಯಾಶಂಕರ ಎಸ್. (ಸಂ), (1993), ಸಮಗ್ರ ವಚನ ಸಂಪುಟ: ಏಳು; ಸಂಕೀರ್ಣ ವಚನ ಸಂಪುಟ–2, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ವಚನ ಸಂಖ್ಯೆ. 853, ಪು.ಸಂ. 271
6. ಮರುಳ ಸಿದ್ದಪ್ಪ ಕೆ. & ನಾಗರಾಜ ಕಿ.ರಂ. (ಸಂ), (2015), ವಚನ ಕಮ್ಮಟ, ಸಪ್ನ ಬುಕ್ ಹೌಸ್, ಬೆಂಗಳೂರು, ವಚನ ಸಂಖ್ಯೆ. 412, ಪು.ಸಂ. 105

7. ವಿದ್ಯಾಶಂಕರ ಎಸ್. (ಸಂ), (1993), ಸಮಗ್ರ ವಚನ ಸಂಪುಟ: ಏಳು; ಸಂಕೀರ್ಣ ವಚನ ಸಂಪುಟ-2, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ವಚನ ಸಂಖ್ಯೆ. 1243, ಪು.ಸಂ. 408
8. ಶ್ರೀನಿವಾಸಮೂರ್ತಿ ಎಂ.ಆರ್. (ಪ್ರ.ಸಂ), (1956), ವಚನ ಧರ್ಮಸಾರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು.ಸಂ. 62

## ಪರಾಮರ್ಶನಾ ಗ್ರಂಥಗಳು:

1. ಕಲಬುರ್ಗಿ ಎಂ.ಎಂ. (ಸಂ), (1993), ಸಮಗ್ರ ವಚನ ಸಂಪುಟ: ಒಂದು; ಬಸವಣ್ಣನವರ ವಚನ ಸಂಪುಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
2. ಶ್ರೀನಿವಾಸಮೂರ್ತಿ ಎಂ.ಆರ್. (ಪ್ರ.ಸಂ), (1956), ವಚನ ಧರ್ಮಸಾರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಮರುಳ ಸಿದ್ದಪ್ಪ ಕೆ. & ನಾಗರಾಜ ಕಿ.ರಂ. (ಸಂ), (2015), ವಚನ ಕಮ್ಮಟ, ಸಪ್ನ ಬುಕ್ ಹೌಸ್, ಬೆಂಗಳೂರು.
4. ಮಲ್ಲಾಪುರ ಬಿ.ವಿ. (ಸಂ), (1993). ಸಮಗ್ರ ವಚನ ಸಂಪುಟ: ಎರಡು; ಅಲ್ಲಮ ಪ್ರಭುದೇವರ ವಚನ ಸಂಪುಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
5. ವಿದ್ಯಾಶಂಕರ ಎಸ್. (ಸಂ), (1993), ಸಮಗ್ರ ವಚನ ಸಂಪುಟ: ಏಳು; ಸಂಕೀರ್ಣ ವಚನ ಸಂಪುಟ-2, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
6. ವೀರಣ್ಣ ರಾಜೂರ (ಸಂ), (1993), ಸಮಗ್ರ ವಚನ ಸಂಪುಟ: ಐದು; ಶಿವಶರಣೆಯರ ವಚನ ಸಂಪುಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.